**ಶ್ರೀ ಎಸ್.ಎಲ್. ಧರ್ಮೇಗೌಡ:** ಕುಳಿತುಕೊಳ್ಳುತ್ತೇವೆ. ಕಳೆದ 27ನೇ ತಾರೀಖಿನಿಂದ ..

**ಅಧ್ಯಕ್ಷರು:** ಹೀಗಾದರೆ ಹೊರಗೆ ಕಳುಹಿಸಬೇಕಾಗುತ್ತದೆ. ನಾನು ಆ್ಯಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ. ಏನೆಂದರೆ ನಿಮಗೆ ನಿಯಮಗಳೂ ಇಲ್ಲ. ಯಾವುದೂ ಇಲ್ಲ.

**ಶ್ರೀ ಎಸ್.ಎಲ್. ಧರ್ಮೇಗೌಡ:** ಅಲ್ಲ ಸ್ವಾಮಿ, .....

**ಅಧ್ಯಕ್ಷರು:** ಮೊದಲು ಕುಳಿತುಕೊಳ್ಳಿ ನೀವು.

**ಶ್ರೀ ಎಸ್. ಎಲ್. ಧರ್ಮೇಗೌಡ:** ಕುಳಿತುಕೊಳ್ಳಿ ಎಂದು ಮುಂದುಗಡೆಯವರಿಗೆ ಹೇಳುವುದಿಲ್ಲ ಸ್ವಾಮಿ ನೀವು.

**ಅಧ್ಯಕ್ಷರು:** ಒಂದು ಸಾರಿ ಸರಿ, ಎರಡು ಸಾರಿ ಸರಿ, ಎಷ್ಟು ಹೇಳಿದರೂ ಕೇಳುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ, ನಾನು ಪದೇ ಪದೇ ನಿಂತುಕೊಂಡು ನಿಮಗೆ ಹೇಳಬೇಕೇನು? ಇದು ಏನೆಂದು ನನಗೆ ಅರ್ಥವಾಗುವುದಿಲ್ಲ. ನಾನು ಈಗ ಮಾಧುಸ್ವಾಮಿಯವರನ್ನು ಕರೆದಿದ್ದೇನೆ. ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ. ಕುಳಿತುಕೊಳ್ಳಿ ಎಂದರೂ ಒಂದೇ ಸಲ ನಾಲ್ಕಾರು ಜನ ಮಾತನಾಡಿದರೆ ಹೇಗೆ?

**ಶ್ರೀ ಎಂ.ಪಿ. ಪ್ರಕಾಶ್:** ಮಾನ್ಯ ಅಧ್ಯಕ್ಷರೇ, ಸಕಲೇಶಪುರದ ಶಾಸಕರು ಕೇಳಿರತಕ್ಕಂಥಾದ್ದಕ್ಕೂ ಒಂದು ನಿಮಿಷದಲ್ಲಿ ಉತ್ತರ ಕೊಡುತ್ತೇನೆ. ಹಾಸನ ಜಿಲ್ಲೆಯ ಶಾಸಕರೆಲ್ಲರೂ ಕಲೆತು ಮುಖ್ಯಮಂತ್ರಿಗಳಿಗೆ ಮನವಿಯನ್ನು ಕೊಡುವಂಥ ಸಂದರ್ಭದಲ್ಲಿ ನಾನೂ ಅಲ್ಲಿ ಇದ್ದೆ. ನನಗೂ ಒಂದು ಪ್ರತಿಯನ್ನು ಕೊಟ್ಟಿದ್ದಾರೆ. ನಾಳೆ ನಾಡಿದ್ದರಲ್ಲಿ ಅದನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ ಎನ್ನುವ ಮಾತನ್ನು ಮುಖ್ಯಮಂತ್ರಿಯವರು ಹೇಳಿದ್ದಾರೆ. ಚಿಕ್ಕಮಗಳೂರು ಜಿಲ್ಲೆಗೆ ಬೇಕಾಗಿರತಕ್ಕಂಥ ಪರಿಹಾರವನ್ನು ಕೂಡ ನಾವು ಕೊಡುತ್ತೇವೆ. ಇನ್ನೆರಡು ದಿವಸಗಳಲ್ಲಿ, ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕಾದಂಥ ಮೆಮೊರ್ಯಾಂಡಂ ಅನ್ನೂ ಕೂಡ ತಯಾರು ಮಾಡುತ್ತಿದ್ದೇವೆ.

**ಅಧ್ಯಕ್ಷರು:** ಈಗ ಮಾಧುಸ್ವಾಮಿಯವರು.

**(ಇ) ವಿಷಯ:** ಮೆಡಿಕಲ್ ಮತ್ತು ಡೆಂಟಲ್ ಕೋರ್ಸ್ ಪರೀಕ್ಷೆಗೆ ಸಂಬಂಧಿಸಿದಂತೆ ರೀವ್ಯಾಲ್ಯುಯೇಷನ್‌ಗೆ ಹಾಕಿರುವ ವಿದ್ಯಾರ್ಥಿಗಳ ರಿಸಲ್ಟನ್ನು ಬೇಗ ಅನೌನ್ಸ್ ಮಾಡುವ ಬಗ್ಗೆ.

**ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):** ಮಾನ್ಯ ಅಧ್ಯಕ್ಷರೆ, ಮುಂದಿನ ವಾರದಿಂದ ಮೆಡಿಕಲ್ ಮತ್ತು ಡೆಂಟಲ್ ಪರೀಕ್ಷೆಗಳ ಪ್ರಕ್ರಿಯೆಗಳು ಆರಂಭವಾಗುತ್ತಿವೆ. ಆದರೆ, ರೀವ್ಯಾಲ್ಯುಯೇಷನ್‌ಗೆ ಹಾಕಿದ್ದವರಿಗೆ ಈವರೆಗೆ ರಿಸಲ್ಟ್ ಕೊಟ್ಟಿಲ್ಲ. ಇನ್ನೊಂದು ವಾರದಲ್ಲಿ ಅವರು ಮತ್ತೊಂದು ಪರೀಕ್ಷೆ ತೆಗೆದುಕೊಳ್ಳಬೇಕಾದ ಪರಿಸ್ಥಿತಿ ಇದೆ. ರೀವ್ಯಾಲ್ಯುವೇಷನ್ ಮಾಡಿ, ಆ ವಿದ್ಯಾರ್ಥಿಗಳು ಪಾಸ್ ಆಗಿದ್ದಾರೆಯೇ ಅಥವಾ ಫೇಲ್ ಆಗಿದ್ದಾರೆಯೇ ಎಂದು ಹೇಳುವಂಥಾದ್ದನ್ನು ಯೂನಿವರ್ಸಿಟಿಯವರು ಇದುವರೆಗೆ ಮಾಡಿಲ್ಲ. ಸರ್ಕಾರ ದವರು ಇದನ್ನು ಏನಾದರೂ ಗಮನಕ್ಕೆ ತೆಗೆದುಕೊಂಡು, ಮೆಡಿಕಲ್ ಮತ್ತು ಡೆಂಟಲ್ ಕೋರ್ಸ್ ಪರೀಕ್ಷೆಗಳ ರೀವ್ಯಾಲ್ಯುಯೇಷನ್‌ಗೆ ಅರ್ಜಿ ಹಾಕಿರುವವರಿಗೆ ತಕ್ಷಣವೇ ರಿಸಲ್ಟ್ ಅನೌನ್ಸ್ ಮಾಡಿಸುತ್ತಾರೆಯೇ? ರಿಸಲ್ಟ್ ಅನೌನ್ಸ್ ಮಾಡುವುದು ಅಕಸ್ಮಾತ್ ಲೇಟಾದರೆ, ಅವರು ಪರೀಕ್ಷೆ ಕಟ್ಟಲು ಅನುಮಾಗುವಂತೆ ತಾರೀಖನ್ನು ಮುಂದಕ್ಕೆ ಹಾಕುತ್ತಾರೆಯೇ ಎನ್ನುವುದನ್ನು ಕೇಳಲು ಬಯಸುತ್ತೇನೆ.

**ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು)** : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಈ ವಿಷಯವನ್ನು ಹಿಂದೆಯೂ ಕೂಡ ಸರ್ಕಾರದ ಗಮನಕ್ಕೆ ತಂದಿದ್ದರು. ಆದರೆ ಅವರು ಪಾಪ ಸಂಕೋಚಕ್ಕೆ ಬಿದ್ದು ವಿಷಯವನ್ನು ಹೇಳಿಲ್ಲ.

**ಶ್ರೀ ಜೆ. ಸಿ. ಮಾಧುಸ್ವಾಮಿ** : ಅದಕ್ಕೆ ಸಂಬಂಧಪಟ್ಟಿದ್ದಲ್ಲ. ಈಗ ಮೆಡಿಕಲ್ ಮತ್ತು ಡೆಂಟಲ್ ಕಾಲೇಜುಗಳಲ್ಲಿ ರೀವ್ಯಾಲ್ಯುಯೇಷನ್‌ಗೆ ವಿದ್ಯಾರ್ಥಿಗಳು ಅರ್ಜಿ ಹಾಕಿದ್ದು, ಇದುವರೆಗೆ ಅವರಿಗೆ ರಿಸಲ್ಟ್ ಕೊಟ್ಟಿಲ್ಲ. ಇನ್ನೊಂದು ವಾರಕ್ಕೆ, ಮುಂದಿನ ಎಗ್ಸಾಮಿನೇಷನ್ ಕಟ್ಟುವುದಕ್ಕೆ ಪ್ರಕ್ರಿಯೆ ಮುಗಿದುಹೋಗಿಬಿಡುತ್ತದೆ. ಹಾಗಾಗಿ, ಅವರು ಆ ಪ್ರಕ್ರಿಯೆಯಲ್ಲಿ ಸೇರಿಕೊಳ್ಳಲು ಆಗುವುದಿಲ್ಲ. ಒಂದು ಎಗ್ಸಾಮ್ ಜಂಪ್ ಆಗಿಬಿಡುತ್ತದೆ. ಅವರು ಪಾಸ್ ಆಗಿದ್ದಾರೆಯೇ, ಫೇಲ್ ಆಗಿದ್ದಾರೆಯೇ ಎನ್ನುವುದು ಗೊತ್ತಾಗಬೇಕು. ಆದ್ದರಿಂದ ತಕ್ಷಣ ರಿಸಲ್ಟ್ ಕೊಡುವ ಹಾಗೆ ಮಾಡಬೇಕು.

**ಶ್ರೀ ಎಂ. ಪಿ. ಪ್ರಕಾಶ್** : ನಾನು ಸಂಬಂಧಪಟ್ಟಿರತಕ್ಕಂಥ ಇಲಾಖೆಯ ಮಂತ್ರಿಗಳ ಜೊತೆ ಮಾತನಾಡಿ ಅವರಿಗೆ ತಕ್ಷಣದಲ್ಲಿ ಒಂದೋ ಫಲಿತಾಂಶವನ್ನು ಪ್ರಕಟಮಾಡುವುದನ್ನಾದರೂ ಮಾಡುತ್ತೇವೆ, ಇಲ್ಲದಿದ್ದರೆ ಮುಂದಿನ ಪರೀಕ್ಷೆಗೆ ಅವರನ್ನು ಸೇರಿಸುವಂಥ ಅವಕಾಶಗಳನ್ನು ಮುಂದುವರಿಸತಕ್ಕಂಥಾದ್ದನ್ನಾದರೂ ಮಾಡುತ್ತೇವೆ. ಅವರಿಗೆ ತೊಂದರೆಯಾಗದಂತೆ ಮಾಡುತ್ತೇವೆ. ಇನ್ನೊಂದು ವಿಷಯ ತಾವು ಏನು ಹೇಳಿದಿರಿ ಅದನ್ನು ಹೇಳಲೇ? ಈಗ ರೀವ್ಯಾಲ್ಯುಯೇಷನ್‌ಗೆ ಹಾಕಿರತಕ್ಕಂಥ ವಿಚಾರದಲ್ಲಿ, ಮಾನ್ಯ ಮಾಧುಸ್ವಾಮಿಯವರ ಸಹೋದರಿಯ ಮಗ ಹಾಸನದ ಒಂದು ಕಾಲೇಜಿನಲ್ಲಿ ಓದುತ್ತಿದ್ದ. ಇವರು ಈ ವಿಚಾರವನ್ನು . . .

**ಶ್ರೀ ಜೆ.ಸಿ. ಮಾಧುಸ್ವಾಮಿ:** ನಾನು ಇಲ್ಲಿ ಇಂಜಿನಿಯರಿಂಗ್ ಸ್ಟೂಡೆಂಟ್ಸ್ ವಿಷಯವನ್ನು ಪ್ರಸ್ತಾಪ ಮಾಡಿ, ಮಾತನಾಡಿದರೆ, ನಾನು ಮಾತನಾಡಿದೆ ಎನ್ನುವ ಕಾರಣಕ್ಕಾಗಿ, ಹಾಸನ ಕಾಲೇಜಿನಲ್ಲಿರುವ ಎಲ್ಲಾ ಹುಡುಗರನ್ನೂ ಪ್ರಮೋಟ್ ಮಾಡಿ ನನ್ನ ರಿಲೇಟಿವ್ ಒಬ್ಬನನ್ನು ಮಾತ್ರ ಇವರು ಫೇಲ್ ಮಾಡಿದ್ದಾರೆ. ಅದನ್ನು ನಾವು ಅವರಿಗೆ ವೈಯಕ್ತಿಕವಾಗಿ ಹೇಳಿದ್ದೆ. ಈ ಅಸೆಂಬ್ಲಿಯಲ್ಲಿ ನಿಂತುಕೊಂಡು ಮಾತನಾಡುವುದು ಪಾಪ ಎಂದಾಗಿಬಿಟ್ಟಿದೆ. ಇದನ್ನು ನಾನು ಬಹಳ ನೋವಿನಲ್ಲಿ ಹೇಳುತ್ತಿದ್ದೇನೆ. ಅಲ್ಲಿ, ಅವನೊಬ್ಬನನ್ನು ಬಿಟ್ಟು ಎಲ್ಲರನ್ನೂ ಪ್ರಮೋಟ್ ಮಾಡಿದ್ದಾರೆ. ಇದರ ಬಗ್ಗೆ ಒಂದು ಎನ್‌ಕ್ವೈರಿಯಾಗಬೇಕು. ನಾನು ಇದನ್ನು ಹುಡುಗಾಟಕ್ಕೆ ಬಿಡುವುದಿಲ್ಲ. ಇಲ್ಲಿ ಬಿಟ್ಟರೂ ನಾನು ಹೈಕೋರ್ಟ್‌ಗೆ ಹೋಗುತ್ತೇನೆ. ನಾನು ಅದನ್ನು ತಮಾಷೆಯಾಗಿ ತೆಗೆದುಕೊಂಡಿಲ್ಲ. ನನಗೆ ಮಾಹಿತಿ ಕೊಟ್ಟಿದ್ದಾನೆ ಎನ್ನುವ ಒಂದೇ ಒಂದು ಕಾರಣಕ್ಕೆ ಮಲೆನಾಡು ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದುತ್ತಿದ್ದಂಥ ನನ್ನ ತಂಗಿಯ ಮಗನೊಬ್ಬನನ್ನು ಮಾತ್ರ ಫೇಲ್ ಮಾಡಿ, ಉಳಿದ ಎರಡು ಸೆಂಟರ್‌ಗಳಲ್ಲಿದ್ದಂಥ ವಿದ್ಯಾರ್ಥಿಗಳನ್ನು ರೀವ್ಯಾಲ್ಯುಯೇಷನ್‌ಗೆ ಹಾಕಿಸಿ ಎಲ್ಲರನ್ನೂ ಪಾಸ್ ಮಾಡಿದ್ದಾರೆ. ಈ ರೀತಿಯ ಸೇಡಿನ ಕ್ರಮಕ್ಕೆ ಹೆದರುವಂಥ ಎಂ.ಎಲ್.ಎ. ಗಿರಿಯನ್ನು ಮಾಡುವುದಕ್ಕೆ ನಾವು ಇಲ್ಲಿಗೆ ಬಂದಿಲ್ಲ. ಅದನ್ನು ಸರ್ಕಾರ ನಡೆಸುವವರು, ತಾವು ನೋಡಬೇಕು. ಈ ಮಟ್ಟಕ್ಕೆ ಯೂನಿವರ್ಸಿಟಿಗಳು ಇಳಿದರೆ ಹೇಗೆ? ಒಬ್ಬನೇ ಒಬ್ಬನನ್ನು ಫೇಲ್ ಮಾಡಿದ್ದಾರೆ. ಆವತ್ತು ನಾನು ಇಲ್ಲಿ ಮಾತನಾಡಿದ ಮೇಲೆ, ರೀವ್ಯಾಲ್ಯುಯೇಷನ್ ಮಾಡಿ ಎಲ್ಲರನ್ನೂ ಪಾಸ್ ಮಾಡಿದ್ದಾರೆ. ಆದರೆ ಅವನೊಬ್ಬನನ್ನು ಫೇಲ್ ಮಾಡಿದ್ದಾರೆ. ಅದು ಏನಾಗುತ್ತದೋ, ಆಗಲಿ,

**ಶ್ರೀ ಎಂ. ಪಿ. ಪ್ರಕಾಶ್** : ಏಳು ಸೆಮಿಸ್ಟರ್‌ಗಳಲ್ಲಿ 75ಕ್ಕಿಂತ ಹೆಚ್ಚು ಮಾರ್ಕ್ಸ್ ತೆಗೆದುಕೊಂಡಿದ್ದು, ಕೊನೆಯ ಸೆಮಿಸ್ಟಾರ್‌ನಲ್ಲಿ ಈ ರೀತಿ ಆಗಿರತಕ್ಕಂಥಾದ್ದು ನಿಜವಾಗಿಯೂ ವಿಷಾದನೀಯವಾದಂಥ ವಿಚಾರ. ಅದರ ಬಗ್ಗೆ ನಾನು ಸರ್ಕಾರದ ಗಮನಕ್ಕೆ ಕೂಡ ತಂದಿದ್ದೇನೆ.

**ಅಧ್ಯಕ್ಷರು** : ಆಯಿತು, ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳುತ್ತಿದ್ದೇನೆ. ಈಗ ಯಡಿಯೂರಪ್ಪನವರು.

**ಶ್ರೀ ಜಿ. ಎ. ಶ್ರೀರಾಮರೆಡ್ಡಿ** : ಮಾನ್ಯ ಅಧ್ಯಕ್ಷರೆ, ಜೀರೋ ಅವರ್‌ನಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ನಾನು ಸೂಚನೆ ಕೊಟ್ಟಿದ್ದೆ.

**ಅಧ್ಯಕ್ಷರು** : ಇವತ್ತು ಜೀರೋ ಅವರ್‌ನಲ್ಲಿ ಬಹಳಷ್ಟು ಆಗಿದೆ. ಉಳಿದವರಿಗೆ ನಾಳೆ ಅವಕಾಶವನ್ನು ಕೊಡುತ್ತೇನೆ. ಬಹಳ ದಿವಸಗಳಿಂದ ಗಮನ ಸೆಳೆಯುವ ಸೂಚನೆಗಳು ಉಳಿದುಕೊಂಡಿವೆ. ಈಗ ಅವುಗಳನ್ನು ತೆಗೆದು ಕೊಂಡು, ಉಳಿದವರಿಗೆ ನಾಳೆಗೆ ಅವಕಾಶ ಕೊಡುತ್ತೇನೆ.

## 7. ನಿಯಮ 69ರ ಮೇರೆಗೆ ಅಲ್ಪ ಕಾಲಾವಧಿ ಚರ್ಚೆ

**ವಿಷಯ : ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆಯಾಗಿರುವ ಬಾಗಲಕೋಟೆ ಪಟ್ಟಣದ ಜನರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು.**

********

**ಶ್ರೀ ಬಿ. ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** : ಮಾನ್ಯ ಅಧ್ಯಕ್ಷರೆ, ನಮ್ಮ ಹಿರಿಯ ಸಚಿವರಾದ ಮಾನ್ಯ ಎಂ. ಪಿ. ಪ್ರಕಾಶ್‌ರವರು ಸದನದಲ್ಲಿದ್ದಾರೆ. ಈ ಸದನದಿಂದ ನಗುನಗುತ್ತಾ ನಾವು ವಾಪಸ್ಸು ನಮ್ಮ ಕ್ಷೇತ್ರಗಳಿಗೆ ಹೋಗಬಾರದು ಎಂದು ಸರ್ಕಾರದ ಉದ್ದೇಶವಾಗಿದ್ದರೆ ನನ್ನದೇನೂ ಅಭ್ಯಂತರವಿಲ್ಲ. ಬಾಗಲಕೋಟೆ ಪ್ಯಾಕೇಜ್ ಬಗ್ಗೆ ಕಳೆದ ನಾಲ್ಕೈದು ದಿವಸಗಳಿಂದ ಅನೇಕ ರೀತಿಯಲ್ಲಿ ಪ್ರಸ್ತಾಪ ಮಾಡುವಂಥ ಪ್ರಯತ್ನ ಮಾಡಿದ್ದೇವೆ. 719.5 ಮೀಟರ್ ವರೆಗಿನ ನೀರಿಗೆ ಯಾವ್ಯಾವ ಊರುಗಳು ಈಗಾಗಲೇ ಮುಳುಗಡೆ ಆಗುತ್ತಿವೆ, ನವನಗರದ ಸ್ಥಿತಿ ಏನಾಗಿದೆ? 638 ಕೋಟಿ ರೂಪಾಯಿಗಳ ಪ್ಯಾಕೇಜ್‌ನಲ್ಲಿ ಸರ್ಕಾರದ ಕಡೆಯಿಂದ ಸುಮಾರು 19–20 ಕೋಟಿ ರೂಪಾಯಿಗಳನ್ನು ಸಹ ನೀವು ಏಕೆ ಖರ್ಚು ಮಾಡಲಿಲ್ಲ? ಸ್ವತಃ ನಮ್ಮ ಬಾಗಲಕೋಟೆಯ ಶಾಸಕರಾದ ಮಾನ್ಯ ಚರಂತಿಮಠ್‌ರವರು, ಮತ್ತು ನಮ್ಮ ಎಲ್ಲಾ ಪ್ರಮುಖರು ಅಲ್ಲಿ ಧರಣಿ ಸತ್ಯಾಗ್ರಹ ಚಳುವಳಿಗಳನ್ನು ಮಾಡಿ ಕೇಸ್‌ಗಳನ್ನು ಹಾಕಿಸಿಕೊಂಡೆವು. ಆವತ್ತು ಮಾನ್ಯ ಮುಖ್ಯಮಂತ್ರಿಗಳು ಸಚಿವರಾದ ಮಾನ್ಯ ಎಂ. ಪಿ. ಪ್ರಕಾಶ್‌ರವರನ್ನು ಬಾಗಲಕೋಟೆಗೆ ಕಳುಹಿಸಿಕೊಟ್ಟು ಇವೆಲ್ಲ ಸಮಸ್ಯೆಗಳನ್ನು ಬಗೆಹರಿಸುತ್ತೇವೆನ್ನುವ ಭರವಸೆಯನ್ನು ಕೊಟ್ಟರು. 638 ಕೋಟಿ ರೂಪಾಯಿಗಳ ಪ್ಯಾಕೇಜ್‌ನಲ್ಲಿ 20 ಕೋಟಿ ರೂಪಾಯಿಗಳನ್ನು ಸಹ ಇದುವರೆವಿಗೆ ಅವರು ಖರ್ಚು ಮಾಡಿಲ್ಲ. ಇಷ್ಟು ಹಣದ ಪ್ಯಾಕೇಜ್ ಇಟ್ಟಿದ್ದರೂ ಅಲ್ಲಿಗೆ ಖರ್ಚು ಮಾಡದಿರುವುದಕ್ಕೆ ಉದ್ದೇಶವೇನು? ಅಲ್ಲಿ ಪ್ರತಿಪಕ್ಷದ ಶಾಸಕರು, ಪ್ರತಿಪಕ್ಷದ ಎಂ. ಪಿ. ಗಳು ಇದ್ದಾರೆ, ಅದಕ್ಕಾಗಿ ಅಲ್ಲಿಗೆ ಏನೂ ಸವಲತ್ತುಗಳನ್ನು ಕೊಡಿಸಬಾರದೆನ್ನುವ ದುರುದ್ದೇಶ ನಿಮ್ಮದಾಗಿದೆಯೇ? ಹಿಂದೆ ಮಾನ್ಯ ಎಸ್. ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ಈ ಭರವಸೆಯನ್ನು ಕೊಟ್ಟು ಈ ಪ್ಯಾಕೇಜ್ ಅನ್ನು ಘೋಷಣೆ ಮಾಡಿದ್ದರೂ ಇದನ್ನು ಕಾರ್ಯರೂಪಕ್ಕೆ ತಂದಿಲ್ಲ.